# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : 522 (660) |
| ಮಾನ್ಯ ಸದಸ್ಯರ ಹೆಸರು | : ಶ್ರೀ. ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 11-12-2023. |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಆಶಾ ಕಾರ್ಯಕರ್ತೆಯರ ಒಟ್ಟು ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ರಾಜ್ಯಕ್ಕೆ 42,524 ಆಶಾ ಕಾರ್ಯಕರ್ತೆಯರ ಹುದ್ದೆಗಳು ಮಂಜೂರಾಗಿದ್ದು, 41,169 ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ | ಇವರುಗಳನ್ನು ನೇಮಕ ಮಾಡಲು ಇರುವ ಮಾನದಂಡಗಳೇನು? ಹಾಗೂ ಇವರು ಕೈಗೊಳ್ಳುವ ಕೆಲಸಗಳೇನು ಮತ್ತು ಮಾಸಿಕ ವೇತನವೆಷ್ಟು? | • ಆಶಾ ಕಾರ್ಯಕರ್ತೆಯರನ್ನು ನೇಮಕಾತಿ ಮಾಡಲು 2023-24ನೇ ಸಾಲಿನಲ್ಲಿ ನೀಡಲಾದ ಮಾರ್ಗಸೂಚಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br>• ರಾಜ್ಯ ಸರ್ಕಾರದಿಂದ ಮಾಸಿಕ ರೂ.5,000/-ಗಳ ಗೌರವಧನವನ್ನು ಏಪ್ರಿಲ್-2023 ರಿಂದ ನೀಡುತ್ತಿದ್ದು, 12 ಷರತ್ತುಗಳನ್ನು ವಿಧಿಸಲಾಗಿದೆ. ಈ ಅನುದಾನವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 40 ಆರೋಗ್ಯ ಸಂಬಂಧಿ ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಈ ಪ್ರೋತ್ಸಾಹಧನಕ್ಕೆ ಕೇಂದ್ರ ಸರ್ಕಾರದಿಂದ ಶೇ.60 ಮತ್ತು ರಾಜ್ಯ ಸರ್ಕಾರದಿಂದ ಶೇ.40 ರ ಅನುಪಾತದಲ್ಲಿ ಅನುದಾನ ಭರಿಸಲಾಗುತ್ತದೆ. |
| ಇ | ಈ ವೇತನವನ್ನು ನಿಗಧಿತ ಅವಧಿಯಲ್ಲಿ ಪಾವತಿಸಲಾಗುತ್ತಿದೆಯೇ; ಪಾವತಿಸದಿದ್ದಲ್ಲಿ ಕಾರಣಗಳೇನು; ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; | ಆಶಾ ಕಾರ್ಯಕರ್ತೆಯರಿಗೆ ನೀಡುವ ಗೌರವಧನ ಮತ್ತು ಪ್ರೋತ್ಸಾಹಧನವು ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಗೆ ಒಳಪಟ್ಟಿದ್ದು, ಕಾರ್ಯನಿರ್ವಹಿಸಿದ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳನ್ನು ಹೊರತುಪಡಿಸಿ ಕಾಲಮಿತಿಯೊಳಗೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಮಾಸಿಕ ಗೌರವಧನ ಮತ್ತು ಪ್ರೋತ್ಸಾಹಧನವನ್ನು ಪಾವತಿ ಮಾಡಲಾಗುತ್ತಿದೆ. |
| ಈ | ಇವರ ಮಾಸಿಕ ವೇತನವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಇಲ್ಲ |

**ಆಕುಕ/660/ಚು.ರ.ಪ್ರ/2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

Scanned with OKEN Scan

ಅನುಬಂಧ -

ಅನುಬಂಧ - 1 ತಾಲ್ಲೂಕುವಾರು ಆಶಾ ಕಾರ್ಯಕರ್ತೆಯರ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | |
|---|---|---|---|---|---|---|---|---|---|---|
| | | ತಾಲ್ಲೂಕಿನ ಹೆಸರು | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ |
| 1 | ಬಾಗಲಕೋಟೆ | ಬಾದಾಮಿ | 253 | 250 | 3 | 0 | 0 | 0 | 253 | 250 |
| | | ಬಾಗಲಕೋಟೆ | 173 | 172 | 1 | 26 | 25 | 1 | 199 | 197 |
| | | ಬೀಳಗಿ | 131 | 130 | 1 | 0 | 0 | 0 | 131 | 130 |
| | | ಹುನಗುಂದ | 280 | 279 | 1 | 16 | 16 | 0 | 296 | 295 |
| | | ಜಮಖಂಡಿ | 290 | 289 | 1 | 39 | 39 | 0 | 329 | 328 |
| | | ಮುಧೋಳ | 224 | 223 | 1 | 15 | 11 | 4 | 239 | 234 |
| 2 | ಬೆಂಗಳೂರು (ಗ್ರಾ) | ದೇವನಹಳ್ಳಿ | 154 | 143 | 11 | 0 | 0 | 0 | 154 | 143 |
| | | ದೊಡ್ಡಬಳ್ಳಾಪುರ | 240 | 230 | 10 | 15 | 14 | 1 | 255 | 244 |
| | | ಹೊಸಕೋಟೆ | 234 | 219 | 15 | 19 | 17 | 2 | 253 | 236 |
| | | ನೆಲಮಂಗಲ | 172 | 156 | 16 | 0 | 0 | 0 | 172 | 156 |
| 3 | ಬೆಂಗಳೂರು (ನಗರ) | ಆನೇಕಲ್ | 350 | 291 | 59 | 0 | 0 | 0 | 350 | 291 |
| | | ಬೆಂಗಳೂರು ಉತ್ತರ | 292 | 262 | 30 | 0 | 0 | 0 | 292 | 262 |
| | | ಬೆಂಗಳೂರು ದಕ್ಷಿಣ | 164 | 120 | 44 | 0 | 0 | 0 | 164 | 120 |
| | | ಬೆಂಗಳೂರು ಪೂರ್ವ | 67 | 67 | 0 | 0 | 0 | 0 | 67 | 67 |
| 4 | ಬೆಳಗಾವಿ | ಅಥಣಿ | 457 | 450 | 7 | 0 | 0 | 0 | 457 | 450 |
| | | ಬೈಲಹೊಂಗಲ | 334 | 326 | 8 | 0 | 0 | 0 | 334 | 326 |
| | | ಬೆಳಗಾವಿ | 438 | 433 | 5 | 70 | 67 | 3 | 508 | 500 |
| | | ಚಿಕ್ಕೋಡಿ | 498 | 489 | 9 | 26 | 26 | 0 | 524 | 515 |
| | | ಗೋಕಾಕ್ | 534 | 529 | 5 | 24 | 23 | 1 | 558 | 552 |
| | | ಹುಕ್ಕೇರಿ | 333 | 328 | 5 | 0 | 0 | 0 | 333 | 328 |
| | | ಖಾನಾಪುರ | 250 | 239 | 11 | 0 | 0 | 0 | 250 | 239 |
| | | ರಾಯಬಾಗ | 364 | 352 | 12 | 0 | 0 | 0 | 364 | 352 |
| | | ರಾಮದುರ್ಗ | 239 | 237 | 2 | 0 | 0 | 0 | 239 | 237 |
| | | ಸವದತ್ತಿ | 295 | 288 | 7 | 0 | 0 | 0 | 295 | 288 |
| 5 | ಬಳ್ಳಾರಿ | ಬಳ್ಳಾರಿ | 223 | 219 | 4 | 107 | 106 | 1 | 330 | 325 |
| | | ಸಂಡೂರ್ | 229 | 224 | 5 | 0 | 0 | 0 | 229 | 224 |
| | | ಸಿರಗುಪ್ಪಾ | 236 | 236 | 0 | 10 | 10 | 0 | 246 | 246 |
| | | ಕುರ್ಗೋಡು | 138 | 136 | 2 | 0 | 0 | 0 | 138 | 136 |
| | | ಕಂಪ್ಲಿ | 98 | 96 | 2 | 0 | 0 | 0 | 98 | 96 |
| 6 | ಬೀದರ್ | ಔರಾದ | 258 | 254 | 4 | 0 | 0 | 0 | 258 | 254 |
| | | ಬಸವಕಲ್ಯಾಣ | 264 | 253 | 11 | 11 | 11 | 0 | 275 | 264 |
| | | ಭಾಲ್ಕಿ | 247 | 243 | 4 | 0 | 0 | 0 | 247 | 243 |
| | | ಬೀದರ್ | 291 | 281 | 10 | 41 | 41 | 0 | 332 | 322 |
| | | ಹುಮನಾಬಾದ | 250 | 245 | 5 | 0 | 0 | 0 | 250 | 245 |

Scanned with OKEN Scanner

ಅನುಬಂಧ - 1 ತಾಲ್ಲೂಕುವಾರು ಖಾಲಿ ಕಾರ್ಯಕರ್ತೆಯರ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | | |
|---|---|---|---|---|---|---|---|---|---|---|---|
| | | | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ |
| 7 | ವಿಜಯಪುರ | ಬ.ಬಾಗೇವಾಡಿ | 332 | 329 | 3 | 0 | 0 | 0 | 332 | 329 | 3 |
| | | ಬಿಜಾಪುರ | 371 | 369 | 2 | 54 | 50 | 4 | 425 | 419 | 6 |
| | | ಇಂಡಿ | 405 | 389 | 16 | 0 | 0 | 0 | 405 | 389 | 16 |
| | | ಮುದ್ದೇಬಿಹಾಳ | 275 | 270 | 5 | 0 | 0 | 0 | 275 | 270 | 5 |
| | | ಸಿಂದಗಿ | 371 | 371 | 0 | 0 | 0 | 0 | 371 | 371 | 0 |
| 8 | ಚಾಮರಾಜನಗರ | ಚಾಮರಾಜನಗರ | 269 | 263 | 6 | 10 | 9 | 1 | 279 | 272 | 7 |
| | | ಗುಂಡ್ಲುಪೇಟೆ | 177 | 174 | 3 | 0 | 0 | 0 | 177 | 174 | 3 |
| | | ಕೊಳ್ಳೇಗಾಲ | 266 | 254 | 12 | 10 | 10 | 0 | 276 | 264 | 12 |
| | | ಯಳಂದೂರು | 68 | 67 | 1 | 0 | 0 | 0 | 68 | 67 | 1 |
| 9 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 168 | 161 | 7 | 0 | 0 | 0 | 168 | 161 | 7 |
| | | ಚಿಕ್ಕಬಳ್ಳಾಪುರ | 147 | 137 | 10 | 21 | 18 | 3 | 168 | 155 | 13 |
| | | ಚಿಂತಾಮಣಿ | 222 | 211 | 11 | 10 | 10 | 0 | 232 | 221 | 11 |
| | | ಗೌರಿಬಿದ್ನೂರು | 245 | 239 | 6 | 10 | 8 | 2 | 255 | 247 | 8 |
| | | ಗುಡಿಬಂಡೆ | 54 | 51 | 3 | 0 | 0 | 0 | 54 | 51 | 3 |
| | | ಶಿಡ್ಲಘಟ್ಟ | 181 | 170 | 11 | 6 | 3 | 3 | 187 | 173 | 14 |
| 10 | ಚಿಕ್ಕಮಗಳೂರು | ಚಿಕ್ಕಮಗಳೂರು | 194 | 185 | 9 | 20 | 19 | 1 | 214 | 204 | 10 |
| | | ಕಡೂರು | 242 | 229 | 13 | 0 | 0 | 0 | 242 | 229 | 13 |
| | | ಕೊಪ್ಪ | 85 | 81 | 4 | 0 | 0 | 0 | 85 | 81 | 4 |
| | | ಮೂಡಿಗೆರೆ | 109 | 103 | 6 | 0 | 0 | 0 | 109 | 103 | 6 |
| | | ಎನ್.ಆರ್.ಪುರ | 78 | 73 | 5 | 0 | 0 | 0 | 78 | 73 | 5 |
| | | ಶೃಂಗೇರಿ | 37 | 35 | 2 | 0 | 0 | 0 | 37 | 35 | 2 |
| | | ತರೀಕೆರೆ | 194 | 189 | 5 | 0 | 0 | 0 | 194 | 189 | 5 |
| 11 | ಚಿತ್ರದುರ್ಗ | ಚಳ್ಳಕೆರೆ | 320 | 311 | 9 | 18 | 18 | 0 | 338 | 329 | 9 |
| | | ಚಿತ್ರದುರ್ಗ | 280 | 278 | 2 | 54 | 54 | 0 | 334 | 332 | 2 |
| | | ಹಿರಿಯೂರು | 239 | 235 | 4 | 18 | 17 | 1 | 257 | 252 | 5 |
| | | ಹೊಳಲ್ಕೆರೆ | 202 | 201 | 1 | 0 | 0 | 0 | 202 | 201 | 1 |
| | | ಹೊಸದುರ್ಗ | 216 | 216 | 0 | 0 | 0 | 0 | 216 | 216 | 0 |
| | | ಮೊಳಕಾಲ್ಮೂರು | 134 | 134 | 0 | 0 | 0 | 0 | 134 | 134 | 0 |
| 12 | ದಕ್ಷಿಣ ಕನ್ನಡ | ಬೆಳ್ತಂಗಡಿ | 247 | 237 | 10 | 0 | 0 | 0 | 247 | 237 | 10 |
| | | ಬಂಟ್ವಾಳ | 336 | 333 | 3 | 15 | 15 | 0 | 351 | 348 | 3 |
| | | ಮಂಗಳೂರು | 318 | 305 | 13 | 94 | 90 | 4 | 412 | 395 | 17 |
| | | ಪುತ್ತೂರು | 232 | 227 | 5 | 21 | 20 | 1 | 253 | 247 | 6 |
| | | ಸುಳ್ಯ | 118 | 117 | 1 | 0 | 0 | 0 | 118 | 117 | 1 |
| 13 | ದಾವಣಗೆರೆ | ಚನ್ನಗಿರಿ | 291 | 283 | 8 | 0 | 0 | 0 | 291 | 283 | 8 |
| | | ದಾವಣಗೆರೆ | 264 | 261 | 3 | 77 | 72 | 5 | 341 | 333 | 8 |
| | | ಹರಿಹರ | 171 | 171 | 0 | 12 | 9 | 3 | 183 | 180 | 3 |
| | | ಹೊನ್ನಾಳಿ | 240 | 233 | 7 | 0 | 0 | 0 | 240 | 233 | 7 |
| | | ಜಗಳೂರು | 173 | 172 | 1 | 0 | 0 | 0 | 173 | 172 | 1 |

Scanned with OKEN Scanner

ಅನುಬಂಧ - 1 [illegible]

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | | |
|---|---|---|---|---|---|---|---|---|---|---|---|
| | | | ಮಂಜೂರಾತಿ | ಕಾರ್ಯನಿರತ | ಬಾಕಿ | ಮಂಜೂರಾತಿ | ಕಾರ್ಯನಿರತ | ಬಾಕಿ | ಮಂಜೂರಾತಿ | ಕಾರ್ಯನಿರತ | ಬಾಕಿ |
| 14 | ಧಾರವಾಡ | ಧಾರವಾಡ | 238 | 236 | 2 | 69 | 69 | 0 | 307 | 305 | 2 |
| | | ಹುಬ್ಬಳ್ಳಿ | 159 | 155 | 4 | 112 | 110 | 2 | 271 | 265 | 6 |
| | | ಕಲಘಟಗಿ | 141 | 140 | 1 | 0 | 0 | 0 | 141 | 140 | 1 |
| | | ಕುಂದಗೋಳ | 154 | 153 | 1 | 0 | 0 | 0 | 154 | 153 | 1 |
| | | ನವಲಗುಂದ | 160 | 158 | 2 | 0 | 0 | 0 | 160 | 158 | 2 |
| 15 | ಗದಗ | ಗದಗ | 178 | 170 | 8 | 52 | 52 | 0 | 230 | 222 | 8 |
| | | ಮುಂಡರಗಿ | 113 | 113 | 0 | 0 | 0 | 0 | 113 | 113 | 0 |
| | | ನರಗುಂದ | 64 | 63 | 1 | 0 | 0 | 0 | 64 | 63 | 1 |
| | | ರೋಣ | 208 | 205 | 3 | 0 | 0 | 0 | 208 | 205 | 3 |
| | | ಶಿರಹಟ್ಟಿ | 152 | 149 | 3 | 0 | 0 | 0 | 152 | 149 | 3 |
| 16 | ಕಲಬುರಗಿ | ಅಫಜಲಪುರ | 195 | 194 | 1 | 0 | 0 | 0 | 195 | 194 | 1 |
| | | ಆಳಂದ | 295 | 288 | 7 | 0 | 0 | 0 | 295 | 288 | 7 |
| | | ಚಿತಾಪುರ | 298 | 287 | 11 | 28 | 28 | 0 | 326 | 315 | 11 |
| | | ಚಿಂಚೋಳಿ | 252 | 250 | 2 | 0 | 0 | 0 | 252 | 250 | 2 |
| | | ಗುಲ್ಬರ್ಗ | 302 | 297 | 5 | 51 | 50 | 1 | 353 | 347 | 6 |
| | | ಸೇಡಮ್ | 180 | 178 | 2 | 8 | 8 | 0 | 188 | 186 | 2 |
| | | ಜೇವರ್ಗಿ | 290 | 287 | 3 | 0 | 0 | 0 | 290 | 287 | 3 |
| 17 | ಹಾಸನ | ಆಲೂರ್ | 78 | 75 | 3 | 0 | 0 | 0 | 78 | 75 | 3 |
| | | ಅರಕಲಗೂಡು | 192 | 191 | 1 | 0 | 0 | 0 | 192 | 191 | 1 |
| | | ಅರಸೀಕೆರೆ | 272 | 265 | 7 | 11 | 11 | 0 | 283 | 276 | 7 |
| | | ಬೇಲೂರು | 171 | 164 | 7 | 0 | 0 | 0 | 171 | 164 | 7 |
| | | ಸಿ.ಆರ್.ಪಟ್ಟಣ | 233 | 233 | 0 | 0 | 0 | 0 | 233 | 233 | 0 |
| | | ಹಾಸನ | 252 | 241 | 11 | 22 | 22 | 0 | 274 | 263 | 11 |
| | | ಹೊಳೆನರಸೀಪುರ | 152 | 151 | 1 | 0 | 0 | 0 | 152 | 151 | 1 |
| | | ಸಕಲೇಶಪುರ | 115 | 111 | 4 | 0 | 0 | 0 | 115 | 111 | 4 |
| 18 | ಹಾವೇರಿ | ಬ್ಯಾಡಗಿ | 140 | 126 | 14 | 0 | 0 | 0 | 140 | 126 | 14 |
| | | ಹಾನಗಲ್ | 280 | 267 | 13 | 0 | 0 | 0 | 280 | 267 | 13 |
| | | ಹಾವೇರಿ | 230 | 222 | 8 | 15 | 15 | 0 | 245 | 237 | 8 |
| | | ಹಿರೇಕೆರೂರು | 230 | 229 | 1 | 0 | 0 | 0 | 230 | 229 | 1 |
| | | ರಾಣೆಬೆನ್ನೂರು | 232 | 220 | 12 | 14 | 14 | 0 | 246 | 234 | 12 |
| | | ಸವಣೂರು | 118 | 118 | 0 | 22 | 22 | 0 | 140 | 140 | 0 |
| | | ಶಿಗ್ಗಾಂವ್ | 220 | 205 | 15 | 0 | 0 | 0 | 220 | 205 | 15 |
| 19 | ಕೊಡಗು | ಮಡಿಕೇರಿ | 112 | 112 | 0 | 10 | 9 | 1 | 122 | 121 | 1 |
| | | ಸೋಮವಾರಪೇಟೆ | 194 | 192 | 2 | 0 | 0 | 0 | 194 | 192 | 2 |
| | | ವಿರಾಜಪೇಟೆ | 186 | 183 | 3 | 0 | 0 | 0 | 186 | 183 | 3 |
| 20 | ಕೋಲಾರ | ಬಂಗಾರಪೇಟೆ | 182 | 164 | 18 | 21 | 19 | 2 | 203 | 183 | 20 |
| | | ಕೋಲಾರ | 230 | 210 | 20 | 17 | 16 | 1 | 247 | 226 | 21 |
| | | ಮಾಲೂರು | 145 | 137 | 8 | 9 | 8 | 1 | 154 | 145 | 9 |
| | | ಮುಳಬಾಗಿಲು | 183 | 180 | 3 | 14 | 14 | 0 | 197 | 194 | 3 |
| | | ಶ್ರೀನಿವಾಸಪುರ | 160 | 154 | 6 | 13 | 13 | 0 | 173 | 167 | 6 |

Scanned with OKEN Scanner

## ಅನುಬಂಧ - 1 ತಾಲ್ಲೂಕುವಾರು ಅಂಗ. ಕಾರ್ಯಕರ್ತೆಯರ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | | |
|---|---|---|---|---|---|---|---|---|---|---|---|
| | | | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ |
| 14 | ಧಾರವಾಡ | ಧಾರವಾಡ | 238 | 236 | 2 | 69 | 69 | 0 | 307 | 305 | 2 |
| | | ಹುಬ್ಬಳ್ಳಿ | 139 | 135 | 4 | 132 | 130 | 2 | 271 | 265 | 6 |
| | | ಕಲಘಟಗಿ | 141 | 140 | 1 | 0 | 0 | 0 | 141 | 140 | 1 |
| | | ಕುಂದಗೋಳ | 154 | 153 | 1 | 0 | 0 | 0 | 154 | 153 | 1 |
| | | ನವಲಗುಂದ | 160 | 158 | 2 | 0 | 0 | 0 | 160 | 158 | 2 |
| 15 | ಗದಗ | ಗದಗ | 178 | 170 | 8 | 52 | 52 | 0 | 230 | 222 | 8 |
| | | ಮುಂಡರಗಿ | 113 | 113 | 0 | 0 | 0 | 0 | 113 | 113 | 0 |
| | | ನರಗುಂದ | 64 | 63 | 1 | 0 | 0 | 0 | 64 | 63 | 1 |
| | | ರಾನ್ | 208 | 205 | 3 | 0 | 0 | 0 | 208 | 205 | 3 |
| | | ಶಿರಹಟ್ಟಿ | 152 | 149 | 3 | 0 | 0 | 0 | 152 | 149 | 3 |
| 16 | ಕಲಬುರಗಿ | ಅಫಜಲಪುರ | 195 | 194 | 1 | 0 | 0 | 0 | 195 | 194 | 1 |
| | | ಆಳಂದ | 295 | 288 | 7 | 0 | 0 | 0 | 295 | 288 | 7 |
| | | ಚಿತಾಪುರ | 298 | 287 | 11 | 28 | 28 | 0 | 326 | 315 | 11 |
| | | ಚಿಂಚೋಳಿ | 252 | 250 | 2 | 0 | 0 | 0 | 252 | 250 | 2 |
| | | ಗುಲ್ಬರ್ಗ | 302 | 297 | 5 | 51 | 50 | 1 | 353 | 347 | 6 |
| | | ಸೇಡಮ್ | 180 | 178 | 2 | 8 | 8 | 0 | 188 | 186 | 2 |
| | | ಜೇವರ್ಗಿ | 290 | 287 | 3 | 0 | 0 | 0 | 290 | 287 | 3 |
| 17 | ಹಾಸನ | ಆಲೂರ್ | 78 | 75 | 3 | 0 | 0 | 0 | 78 | 75 | 3 |
| | | ಅರಕಲಗೂಡು | 192 | 191 | 1 | 0 | 0 | 0 | 192 | 191 | 1 |
| | | ಅರಸೀಕೆರೆ | 272 | 265 | 7 | 11 | 11 | 0 | 283 | 276 | 7 |
| | | ಬೇಲೂರು | 171 | 164 | 7 | 0 | 0 | 0 | 171 | 164 | 7 |
| | | ಸಿ.ಆರ್.ಪಟ್ಟಣ | 233 | 233 | 0 | 0 | 0 | 0 | 233 | 233 | 0 |
| | | ಹಾಸನ | 252 | 241 | 11 | 22 | 22 | 0 | 274 | 263 | 11 |
| | | ಹೊಳೆನರಸೀಪುರ | 152 | 151 | 1 | 0 | 0 | 0 | 152 | 151 | 1 |
| | | ಸಕಲೇಶಪುರ | 115 | 111 | 4 | 0 | 0 | 0 | 115 | 111 | 4 |
| 18 | ಹಾವೇರಿ | ಬ್ಯಾಡಗಿ | 140 | 126 | 14 | 0 | 0 | 0 | 140 | 126 | 14 |
| | | ಹಾನಗಲ್ | 280 | 267 | 13 | 0 | 0 | 0 | 280 | 267 | 13 |
| | | ಹಾವೇರಿ | 230 | 222 | 8 | 15 | 15 | 0 | 245 | 237 | 8 |
| | | ಹಿರೇಕೆರೂರು | 230 | 229 | 1 | 0 | 0 | 0 | 230 | 229 | 1 |
| | | ರಾಣಿಬೆನ್ನೂರು | 232 | 220 | 12 | 14 | 14 | 0 | 246 | 234 | 12 |
| | | ಸವಣೂರು | 118 | 118 | 0 | 22 | 22 | 0 | 140 | 140 | 0 |
| | | ಶಿಗ್ಗಾಂವ್ | 220 | 205 | 15 | 0 | 0 | 0 | 220 | 205 | 15 |
| 19 | ಕೊಡಗು | ಮಡಿಕೆರೆ | 112 | 112 | 0 | 10 | 9 | 1 | 122 | 121 | 1 |
| | | ಸೋಮವಾರಪೇಟೆ | 194 | 192 | 2 | 0 | 0 | 0 | 194 | 192 | 2 |
| | | ವಿರಾಜಪೇಟೆ | 186 | 183 | 3 | 0 | 0 | 0 | 186 | 183 | 3 |
| 20 | ಕೋಲಾರ | ಬಂಗಾರಪೇಟೆ | 182 | 164 | 18 | 21 | 19 | 2 | 203 | 183 | 20 |
| | | ಕೋಲಾರ | 230 | 210 | 20 | 17 | 16 | 1 | 247 | 226 | 21 |
| | | ಮಾಲೂರು | 145 | 137 | 8 | 9 | 8 | 1 | 154 | 145 | 9 |
| | | ಮುಳಬಾಗಿಲು | 183 | 180 | 3 | 14 | 14 | 0 | 197 | 194 | 3 |
| | | ಶ್ರೀನಿವಾಸಪುರ | 160 | 154 | 6 | 13 | 13 | 0 | 173 | 167 | 6 |

Scanned with OKEN Scanner

ಅನುಬಂಧ - 1 ತಾಲ್ಲೂಕುವಾರು ಆಶಾ ಕಾರ್ಯಕರ್ತೆಯರ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | | |
|---|---|---|---|---|---|---|---|---|---|---|---|
| | | | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ |
| 21 | ಕೊಪ್ಪಳ | ಗಂಗಾವತಿ | 346 | 327 | 19 | 100 | 95 | 5 | 446 | 422 | 24 |
| | | ಕೊಪ್ಪಳ | 309 | 287 | 22 | 34 | 33 | 1 | 343 | 320 | 23 |
| | | ಕುಷ್ಟಗಿ | 267 | 250 | 17 | 0 | 0 | 0 | 267 | 250 | 17 |
| | | ಯಲಬುರ್ಗಾ | 287 | 273 | 14 | 0 | 0 | 0 | 287 | 273 | 14 |
| 22 | ಮಂಡ್ಯ | ಕೃಷ್ಣರಾಜಪೇಟೆ | 226 | 224 | 2 | 0 | 0 | 0 | 226 | 224 | 2 |
| | | ಮದ್ದೂರು | 231 | 226 | 5 | 0 | 0 | 0 | 231 | 226 | 5 |
| | | ಮಳವಳ್ಳಿ | 219 | 217 | 2 | 0 | 0 | 0 | 219 | 217 | 2 |
| | | ಮಂಡ್ಯ | 250 | 246 | 4 | 25 | 24 | 1 | 275 | 270 | 5 |
| | | ನಾಗಮಂಗಲ | 162 | 160 | 2 | 0 | 0 | 0 | 162 | 160 | 2 |
| | | ಪಾಂಡವಪುರ | 154 | 154 | 0 | 0 | 0 | 0 | 154 | 154 | 0 |
| | | ಶ್ರೀರಂಗಪಟ್ಟಣ | 130 | 129 | 1 | 0 | 0 | 0 | 130 | 129 | 1 |
| 23 | ಮೈಸೂರು | ಎಚ್.ಡಿ.ಕೋಟೆ | 240 | 239 | 1 | 0 | 0 | 0 | 240 | 239 | 1 |
| | | ಹುಣಸೂರು | 220 | 207 | 13 | 8 | 6 | 2 | 228 | 213 | 15 |
| | | ಕೆ.ಆರ್.ನಗರ | 209 | 203 | 6 | 0 | 0 | 0 | 209 | 203 | 6 |
| | | ಮೈಸೂರು | 300 | 287 | 13 | 92 | 85 | 7 | 392 | 372 | 20 |
| | | ನಂಜನಗೂಡು | 316 | 310 | 6 | 8 | 8 | 0 | 324 | 318 | 6 |
| | | ಪಿರಿಯಾಪಟ್ಟಣ | 191 | 191 | 0 | 0 | 0 | 0 | 191 | 191 | 0 |
| | | ಟಿ.ನರಸೀಪುರ | 255 | 254 | 1 | 0 | 0 | 0 | 255 | 254 | 1 |
| 24 | ರಾಯಚೂರು | ದೇವದುರ್ಗ | 250 | 241 | 9 | 0 | 0 | 0 | 250 | 241 | 9 |
| | | ಲಿಂಗಸುಗೂರು | 310 | 296 | 14 | 0 | 0 | 0 | 310 | 296 | 14 |
| | | ಮಾನ್ವಿ | 278 | 268 | 10 | 0 | 0 | 0 | 278 | 268 | 10 |
| | | ರಾಯಚೂರು | 283 | 256 | 27 | 67 | 67 | 0 | 350 | 323 | 27 |
| | | ಸಿಂಧನೂರು | 290 | 281 | 9 | 30 | 30 | 0 | 320 | 311 | 9 |
| 25 | ರಾಮನಗರ | ಚನ್ನಪಟ್ಟಣ | 184 | 179 | 5 | 15 | 14 | 1 | 199 | 193 | 6 |
| | | ಕನಕಪುರ | 285 | 266 | 19 | 15 | 14 | 1 | 300 | 280 | 20 |
| | | ಮಾಗಡಿ | 172 | 157 | 15 | 0 | 0 | 0 | 172 | 157 | 15 |
| | | ರಾಮನಗರ | 169 | 160 | 9 | 39 | 37 | 2 | 208 | 197 | 11 |
| 26 | ಶಿವಮೊಗ್ಗ | ಭದ್ರಾವತಿ | 203 | 196 | 7 | 36 | 36 | 0 | 239 | 232 | 7 |
| | | ಹೊಸನಗರ | 140 | 140 | 0 | 0 | 0 | 0 | 140 | 140 | 0 |
| | | ಸಾಗರ್ | 169 | 165 | 4 | 8 | 8 | 0 | 177 | 173 | 4 |
| | | ಶಿಕಾರಿಪುರ | 191 | 188 | 3 | 7 | 6 | 1 | 198 | 194 | 4 |
| | | ಶಿವಮೊಗ್ಗ | 217 | 217 | 0 | 36 | 36 | 0 | 253 | 253 | 0 |
| | | ಸೊರಬ | 189 | 186 | 3 | 0 | 0 | 0 | 189 | 186 | 3 |
| | | ತೀರ್ಥಹಳ್ಳಿ | 166 | 162 | 4 | 0 | 0 | 0 | 166 | 162 | 4 |

Scanned with OKEN Scanner

ಅನುಬಂಧ - 1 ತಾಲ್ಲೂಕುವಾರು ಆಶಾ ಕಾರ್ಯಕರ್ತೆಯರ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮೀಣ | | | ನಗರ | | | ಒಟ್ಟು (ಗ್ರಾಮೀಣ ಮತ್ತು ನಗರ) | | |
|---|---|---|---|---|---|---|---|---|---|---|---|
| | | | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ | ಮಂಜೂರಾತಿ | ಕಾರ್ಯನಿರತ | ಖಾಲಿ |
| 27 | ತುಮಕೂರು | ಸಿ.ಎನ್.ಹಳ್ಳಿ | 192 | 190 | 2 | 0 | 0 | 0 | 192 | 190 | 2 |
| | | ಗುಬ್ಬಿ | 242 | 238 | 4 | 0 | 0 | 0 | 242 | 238 | 4 |
| | | ಕೊರಟಗೆರೆ | 146 | 144 | 2 | 0 | 0 | 0 | 146 | 144 | 2 |
| | | ಕುಣಿಗಲ್ | 190 | 180 | 10 | 7 | 7 | 0 | 197 | 187 | 10 |
| | | ಮಧುಗಿರಿ | 249 | 248 | 1 | 0 | 0 | 0 | 249 | 248 | 1 |
| | | ಪಾವಗಡ | 237 | 228 | 9 | 0 | 0 | 0 | 237 | 228 | 9 |
| | | ಶಿರಾ | 260 | 259 | 1 | 8 | 8 | 0 | 268 | 267 | 1 |
| | | ತಿಪಟೂರು | 170 | 162 | 8 | 11 | 11 | 0 | 181 | 173 | 8 |
| | | ತುಮಕೂರು | 259 | 256 | 3 | 17 | 13 | 4 | 276 | 269 | 7 |
| | | ತುರುವೇಕೆರೆ | 166 | 160 | 6 | 0 | 0 | 0 | 166 | 160 | 6 |
| 28 | ಉತ್ತರ ಕನ್ನಡ | ಅಂಕೋಲಾ | 111 | 111 | 0 | 0 | 0 | 0 | 111 | 111 | 0 |
| | | ಭಟ್ಕಳ | 135 | 126 | 9 | 0 | 0 | 0 | 135 | 126 | 9 |
| | | ಹಳಿಯಾಳ | 116 | 115 | 1 | 10 | 9 | 1 | 126 | 124 | 2 |
| | | ಹೊನ್ನಾವರ | 176 | 173 | 3 | 0 | 0 | 0 | 176 | 173 | 3 |
| | | ಕಾರವಾರ | 111 | 109 | 2 | 7 | 7 | 0 | 118 | 116 | 2 |
| | | ಕುಮಟಾ | 155 | 151 | 4 | 0 | 0 | 0 | 155 | 151 | 4 |
| | | ಮುಂಡಗೋಡು | 97 | 97 | 0 | 0 | 0 | 0 | 97 | 97 | 0 |
| | | ಸಿದ್ದಾಪುರ | 149 | 147 | 2 | 0 | 0 | 0 | 149 | 147 | 2 |
| | | ಸಿರ್ಸಿ | 189 | 183 | 6 | 4 | 3 | 1 | 193 | 186 | 7 |
| | | ಜೋಯಿಡಾ | 62 | 58 | 4 | 0 | 0 | 0 | 62 | 58 | 4 |
| | | ಯಲ್ಲಾಪುರ | 78 | 75 | 3 | 0 | 0 | 0 | 78 | 75 | 3 |
| 29 | ಉಡುಪಿ | ಕುಂದಾಪುರ | 372 | 358 | 14 | 0 | 0 | 0 | 372 | 358 | 14 |
| | | ಕಾರ್ಕಳ | 198 | 190 | 8 | 0 | 0 | 0 | 198 | 190 | 8 |
| | | ಉಡುಪಿ | 438 | 420 | 18 | 20 | 19 | 1 | 458 | 439 | 19 |
| 30 | ಯಾದಗಿರಿ | ಶಹಾಪುರ | 290 | 289 | 1 | 12 | 12 | 0 | 302 | 301 | 1 |
| | | ಸುರಾಪುರ | 372 | 361 | 11 | 13 | 13 | 0 | 385 | 374 | 11 |
| | | ಯಾದಗಿರಿ | 303 | 294 | 9 | 34 | 34 | 0 | 337 | 328 | 9 |
| 31 | ವಿಜಯನಗರ | ಹೊಸಪೇಟೆ | 136 | 134 | 2 | 54 | 53 | 1 | 190 | 187 | 3 |
| | | ಹರಪನಹಳ್ಳಿ | 179 | 177 | 2 | 0 | 0 | 0 | 179 | 177 | 2 |
| | | ಕೂಡ್ಲಿಗಿ | 248 | 244 | 4 | 0 | 0 | 0 | 248 | 244 | 4 |
| | | ಹೂವಿನ ಹಡಗಲಿ | 186 | 183 | 3 | 0 | 0 | 0 | 186 | 183 | 3 |
| | | ಹಗರಿಬೊಮ್ಮನಹಳ್ಳಿ | 238 | 238 | 0 | 6 | 6 | 0 | 244 | 244 | 0 |
| 32 | ಬಿ ಬಿ ಎಂ ಪಿ | ಬೊಮ್ಮನಹಳ್ಳಿ | 0 | 0 | 0 | 1229 | 100 | 128 | 1229 | 100 | 128 |
| | | ದಾಸರಹಳ್ಳಿ | 0 | 0 | 0 | | 68 | | | 68 | |
| | | ಪೂರ್ವ | 0 | 0 | 0 | | 154 | | | 154 | |
| | | ಮಹದೇವಪುರ | 0 | 0 | 0 | | 144 | | | 144 | |
| | | ಆರ್ ಆರ್ ನಗರ | 0 | 0 | 0 | | 109 | | | 109 | |
| | | ದಕ್ಷಿಣ | 0 | 0 | 0 | | 195 | | | 195 | |
| | | ಪಶ್ಚಿಮ | 0 | 0 | 0 | | 262 | | | 262 | |
| | | ಯಲಹಂಕ | 0 | 0 | 0 | | 69 | | | 69 | |
| ಒಟ್ಟು | | | 39190 | 38046 | 1149 | 3329 | 3123 | 206 | 42524 | 41169 | 1355 |

Scanned with OKEN Scanner

ಅನುಬಂಧ-2.

ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ

ಆರೋಗ್ಯ ಸೌಧ, ಬೆಂಗಳೂರು-23

ಸಂಖ್ಯೆ: ಎಸ್.ಎನ್.ಒ (ಆಶಾ)/ 18 /2023-24 ದಿನಾಂಕ: 5.09.2023.

## ಆಶಾ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಯ ಪರಿಷ್ಕೃತ ಮಾರ್ಗಸೂಚಿಗಳು.

ವಿಷಯ: ಆಶಾ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ.

ಉಲ್ಲೇಖ:

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಪತ್ರ ಸಂಖ್ಯೆ : ಆರ್‌ಓ/ಆಶಾ/49/2006-07, ದಿ॥ 15.03.2008
2. ಭಾರತ ಸರ್ಕಾರದ ಸಮುದಾಯ ಪ್ರಕ್ರಿಯೆ ಮಾರ್ಗಸೂಚಿಗಳು- 2014
3. ಇದೇ ಕಚೇರಿಯ ಪತ್ರ ಸಂಖ್ಯೆ: ಆರ್‌ಓ(ಆರ್‌ಸಿಹೆಚ್)/10/2015-16, ದಿ॥ 28.09.2015
4. ಇದೇ ಕಚೇರಿಯ ಸುತ್ತೋಲೆ ಸಂಖ್ಯೆ: ಆರ್‌ಓ(ಆರ್‌ಸಿಹೆಚ್)/14/2020-21, ದಿ॥ 08.08.2020

*****

ಪ್ರಸ್ತಾವನೆ:

ರಾಷ್ಟ್ರೀಯ ಆರೋಗ್ಯ ಅಭಿಯಾನವು ಆರೋಗ್ಯ ಕ್ಷೇತ್ರದ ಉತ್ತಮೀಕರಣಕ್ಕೆ ರೂಪುಗೊಂಡ ವಿಶಿಷ್ಟವಾದ ಅಭಿಯಾನ ಸ್ವರೂಪಿ ಕಾರ್ಯಕ್ರಮ. ಸಾಮಾಜಿಕ ಆರೋಗ್ಯ ವರ್ಧಕಗಳಿಗೆ ಒತ್ತು ನೀಡುವ ಹಾಗೂ ಸಮುದಾಯ ಪ್ರಕ್ರಿಯೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರನ್ನು ಸಮುದಾಯದಿಂದ ಗುರುತಿಸಿ ಆಯ್ಕೆ ಮಾಡಲಾಗಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವು ಜಾರಿಯಾದ ಕಾಲಘಟ್ಟದಿಂದಲೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಸಮುದಾಯದ ಉತ್ತಮೀಕರಣದಲ್ಲಿ ಆಶಾ ಕಾರ್ಯಕರ್ತೆಯು ಸಕ್ರಿಯವಾಗಿ ಭಾಗಿಯಾಗಿರುತ್ತಾರೆ. ಆಶಾ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ರೂಪಿಸಿದ ಮಾರ್ಗಸೂಚಿಗಳನ್ನು ಪ್ರಸ್ತುತ ಕಾಲಘಟ್ಟದ ಸನ್ನಿವೇಶಕ್ಕೆ ಪರಿಷ್ಕರಿಸುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪರಿಷ್ಕೃತ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದ್ದು, ವಿವರಗಳು ಕೆಳಗಿನಂತಿವೆ.

1. ಅರ್ಹತೆಗಳು:

- ಆಯ್ಕೆ ಮಾಡಲು ಉದ್ದೇಶಿಸಿರುವ ಅಭ್ಯರ್ಥಿಯು ಸ್ಥಳೀಯ ಗ್ರಾಮ/ಪ್ರದೇಶ/ವಾರ್ಡ್‌ನ ನಿವಾಸಿಯಾಗಿರಬೇಕು.
- 25-45 ರ ನಡುವಿನ ವಯೋಮಾನದ ವಿವಾಹಿತ ಮಹಿಳೆಯಾಗಿರಬೇಕು.
- ವಿಧವೆ/ವಿಚ್ಛೇದಿತಾ/ಪರಿತ್ಯಕ್ತ ಮಹಿಳೆಯರಿಗೆ ಮೊದಲ ಆದ್ಯತೆಯನ್ನು ನೀಡಬೇಕು.



Scanned with OKEN Scanner

- ದುರ್ಬಲ ಮತ್ತು ಆಶ್ರಿತ ವರ್ಗದ ಜನಾಂಗದವರಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯತೆಯನ್ನು ನೀಡಬೇಕು.
- ಕುಟುಂಬವು ಸಂಪೂರ್ಣವಾಗಿದ್ದು, ಸಂತಾನ ನಿರೋಧ ಚಿಕಿತ್ಸೆಗೆ ಒಳಗಾಗಿರಬೇಕು.
- ವಿಧವೆಯರು, ಮಕ್ಕಳಿಲ್ಲದ ವಿಚ್ಛೇದಿತಾ/ಪರಿತ್ಯಕ್ತ ಮಹಿಳೆಯರಿಗೆ ಸಂತಾನ ನಿರೋಧ ಚಿಕಿತ್ಸೆಯಿಂದ ವಿನಾಯಿತಿ ನೀಡಬಹುದು ಹಾಗೂ ಮರುವಿವಾಹವಾದ ನಂತರ ಕರ್ತವ್ಯದಿಂದ ಬಿಡುಗಡೆ ಮಾಡುವುದು.
- ನಾಯಕತ್ವ ಗುಣಗಳು ಮತ್ತು ಉತ್ತಮ ಸಂವಹನಾ ಕೌಶಲ್ಯವಿರಬೇಕು.
- ಕುಟುಂಬ ಮತ್ತು ಸಮಾಜದ ಬೆಂಬಲವಿರಬೇಕು.
- ಕನಿಷ್ಠ ವಿದ್ಯಾರ್ಹತೆಯು 10 ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಸ್ಮಾರ್ಟ್ ಫೋನ್, ಐಟಿ ಟ್ಯಾಬ್ಲೆಟ್ ಹಾಗೂ ಕಂಪ್ಯೂಟರ್ ಬಳಕೆಯ ಜ್ಞಾನವಿರಬೇಕು.

೨. ಕಾರ್ಯ ವ್ಯಾಪ್ತಿ:

ಆಶಾ ಕಾರ್ಯಕರ್ತೆಯರಿಗೆ ಜನಸಂಖ್ಯೆಯ ಆಧಾರದ ಮೇಲೆ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಲಾಗಿದ್ದು, ಜನಸಾಂದ್ರತೆಯು ಹೆಚ್ಚಿರುವ ಹಿನ್ನೆಲೆಯಲ್ಲಿ ಹೊಸ ಆಯ್ಕೆ ಪ್ರಕ್ರಿಯೆಯಲ್ಲಿ ಕೆಳಕಂಡ ಜನಸಂಖ್ಯೆಯನ್ನು ಪರಿಗಣಿಸುವುದು. ಪ್ರಸ್ತುತ 1000 ಜನಸಂಖ್ಯೆಗಿಂತ ಕಡಿಮೆ ವ್ಯಾಪ್ತಿಯನ್ನು ಹೊಂದಿರುವ ಗ್ರಾಮೀಣ ಪ್ರದೇಶಗಳ ಆಶಾ ಕಾರ್ಯಕರ್ತೆಯರಿಗೆ ನೆರೆಹೊರೆಯ ಗ್ರಾಮ/ಪ್ರದೇಶದ ಹೆಚ್ಚುವರಿ ಜನಸಂಖ್ಯೆಯನ್ನು ಹಂಚಿಕೆ ಮಾಡುವುದು ಹಾಗೂ ಈ ಪ್ರದೇಶಗಳ ವ್ಯಾಪ್ತಿಯು 2 ಕಿಲೋ ಮೀಟರ್ ಸುತ್ತಳತೆಯನ್ನು ಮೀರುವಂತಿಲ್ಲ.

| ಕ್ರ.ಸಂ | ವಲಯ | ಜನಸಂಖ್ಯೆಯ ವ್ಯಾಪ್ತಿ (2011 ನೇ ಜನಗಣತಿಯ ಆಧಾರದ ಮೇಲೆ) ಕನಿಷ್ಠ ಜನಸಂಖ್ಯೆ | ಜನಸಂಖ್ಯೆಯ ವ್ಯಾಪ್ತಿ (2011 ನೇ ಜನಗಣತಿಯ ಆಧಾರದ ಮೇಲೆ) ಗರಿಷ್ಠ ಜನಸಂಖ್ಯೆ |
|---|---|---|---|
| 1 | ಗ್ರಾಮೀಣ ಪ್ರದೇಶಗಳು.(ಕಂದಾಯ ಗ್ರಾಮಗಳು, ತಾಂಡಾಗಳು, ಕೊಪ್ಪಲುಗಳು) | 1000 | 1999 |
| 2 | ಅರೆನಗರ ಪ್ರದೇಶಗಳು (ಪಟ್ಟಣ ಪಂಚಾಯಿತಿ, ಪುರಸಭೆಗಳ ವ್ಯಾಪ್ತಿ) | 2500 | 3000 |
| 3 | ನಗರ ಪ್ರದೇಶಗಳು. (ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನವು ಅನುಷ್ಠಾನವಾಗುತ್ತಿರುವ ನಗರಗಳು) | 2500 | 3000 |

ವನ್ಯ ಜೀವಿಗಳ ಸಂಚಾರವು ಹೆಚ್ಚಿರುವ ದಟ್ಟ ಅರಣ್ಯ ಪ್ರದೇಶಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ಜನಸಂಖ್ಯೆಯ ಮಿತಿಯಲ್ಲಿ ಸಡಿಲಿಕೆ ಮಾಡಿಕೊಳ್ಳಬಹುದು. ಇನ್ನುಳಿದಂತೆ ಬೇರೆ ಪ್ರದೇಶಗಳಿಗೆ ಸಡಿಲಿಕೆಗೆ ಅವಕಾಶವಿರುವುದಿಲ್ಲ.



Scanned with OKEN Scanner

3. ಆಯ್ಕೆ ಪ್ರಕ್ರಿಯೆ:

3.1. ಗ್ರಾಮೀಣ ಪ್ರದೇಶ :

1) ಆಶಾ ಕಾರ್ಯಕರ್ತೆಯ ಹುದ್ದೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ, ಪೌಷ್ಠಿಕಾಂಶ ಸಮಿತಿಯು ಸಿದ್ಧಪಡಿಸಿ ಅಭ್ಯರ್ಥಿಯ ಪೂರ್ವಾಹತೆಯ ಪರಿಶೀಲನೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಿಗೆ ಸಲ್ಲಿಸಬೇಕು.

2) ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ತಾಳೆಪಟ್ಟಿಯನ್ವಯ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಮುಂದಿಟ್ಟು ಅನುಮೋದನೆ ಪಡೆದು ಗ್ರಾಮ ಪಂಚಾಯತ್‌ಗೆ ಸಲ್ಲಿಸುವುದು. ತಾಳೆಪಟ್ಟಿಯ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

3) ಗ್ರಾಮ ಪಂಚಾಯತ್‌ನ ಸಾಮಾನ್ಯ/ವಿಶೇಷ/ತುರ್ತು ಗ್ರಾಮ ಸಭೆಯ ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಗ್ರಾಮ ಸಭೆಯಲ್ಲಿ ಒಬ್ಬ ಅಭ್ಯರ್ಥಿಯ ಹೆಸರನ್ನು ಆಯ್ಕೆ ಮಾಡುವುದು.

4) ಆಯ್ಕೆಯಾದ ಅಭ್ಯರ್ಥಿಯ ಪಟ್ಟಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸಲ್ಲಿಸುವುದು,

5) ತಾಲ್ಲೂಕು ಆರೋಗ್ಯಾಧಿಕಾರಿಗಳು ಆಯ್ಕೆ ಪ್ರಕ್ರಿಯೆಯನ್ನು ಪರಿಶೀಲಿಸಿ ನಿಯಾಮಾನುಸಾರ ಪಾಲನೆಯಾಗದಿದ್ದಲ್ಲಿ ಮರುಪರಿಶೀಲನೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳಿಗೆ ಹಿಂತಿರುಗಿಸುವುದು.

6) ನಿಯಾಮವಳಿಗಳ ಪ್ರಕಾರ ಆಯ್ಕೆಯಾದ ವಿವರಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳು ಕ್ರೋಡಿಕರಿಸಿ ಜಿಲ್ಲಾ ಆರ್.ಸಿ. ಹೆಚ್ ಅಧಿಕಾರಿಗಳಿಗೆ ಸಲ್ಲಿಸುವುದು.

7) ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ವಿವರಗಳನ್ನು ಪರಿಶೀಲಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯಲ್ಲಿ ಪ್ರಸ್ತಾಪಿಸಿ ಅನುಮೋದನೆ ಪಡೆಯುವುದು.

8) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಅನುಮೋದನೆಯ ನಂತರ ಆಯ್ಕೆಯಾದ ಪಟ್ಟಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ/ಗ್ರಾಮ ಪಂಚಾಯತ್‌ಗಳ ಕಾರ್ಯಾಲಯಗಳಲ್ಲಿ ಪ್ರಕಟಿಸುವುದು ಹಾಗೂ ಆಶಾ ಆರಂಭಿಕ ತರಬೇತಿಗೆ ನಿಯೋಜನೆ ಮಾಡುವುದು.

9) ಆಶಾ ಕಾರ್ಯಕರ್ತೆಯರು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ನೇಮಕಾತಿ ಆದೇಶವನ್ನು ನೀಡಬಾರದು.

10) ಆಶಾ ಆರಂಬಿಕ ತರಬೇತಿಯು ಮುಗಿದ ನಂತರ ಆಶಾ ಕಾರ್ಯಕರ್ತೆಯರ ಚಟುವಟಿಕೆಗಳಿಗೆ ನಿಯೋಜನೆ ಮಾಡುವುದು.



Scanned with OKEN Scanner

೩.೨. ಆಶಾ ನಗರ ಪ್ರವೇಶ :

1) ಆಶಾ ಕಾರ್ಯಕರ್ತೆಯ ಹುದ್ದೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಸಮುದಾಯಕ್ಕೆ ಮಾಹಿತಿ ನೀಡಲು ವಿವಿಧ ಮಾಧ್ಯಮಗಳ ಮೂಲಕ ಪ್ರಕಟಣೆ ನೀಡುವುದು.

೨) ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ತಾಳೆಪಟ್ಟಿಯನ್ವಯ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಮುಂದೆ ಪ್ರಸ್ತಾಪಿಸಿ ಅನುಮೋದನೆ ಪಡೆದು ಪಟ್ಟಣ ಪಂಚಾಯತ್/ಪುರಸಭೆಗೆ ಸಲ್ಲಿಸುವುದು. ತಾಳೆಪಟ್ಟಿಯ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

3) ಪಟ್ಟಣ ಪಂಚಾಯತ್/ಪುರಸಭೆಯ ಸಾಮಾನ್ಯ ಸ್ಥಾಯಿ ಸಮಿತಿಯು ಸಾಮಾನ್ಯ/ವಿಶೇಷ/ತುರ್ತುಸಭೆಯ ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಅಭ್ಯರ್ಥಿಯ ಹೆಸರನ್ನು ಆಯ್ಕೆ ಮಾಡುವುದು.

4) ಆಯ್ಕೆಯಾದ ಅಭ್ಯರ್ಥಿಯ ವಿವರಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸಲ್ಲಿಸುವುದು.

೫) ತಾಲ್ಲೂಕು ಆರೋಗ್ಯಾಧಿಕಾರಿಗಳು ಆಯ್ಕೆ ಪ್ರಕ್ರಿಯೆಯನ್ನು ಪರಿಶೀಲಿಸಿ ನಿಯಾಮಾನುಸಾರ ಪಾಲನೆಯಾಗದಿದ್ದಲ್ಲಿ ಮರುಪರಿಶೀಲನೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳಿಗೆ ಹಿಂತಿರುಗಿಸುವುದು.

6) ನಿಯಾಮವಳಿಗಳ ಪ್ರಕಾರ ಆಯ್ಕೆಯಾದ ವಿವರಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳು ಕ್ರೋಢಿಕರಿಸಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಿಗೆ ಸಲ್ಲಿಸುವುದು.

7) ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ವಿವರಗಳನ್ನು ಪರಿಶೀಲಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯಲ್ಲಿ ಪ್ರಸ್ತಾಪಿಸಿ ಅನುಮೋದನೆ ಪಡೆಯುವುದು.

8) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಅನುಮೋದನೆಯ ನಂತರ ಆಯ್ಕೆಯಾದ ಪಟ್ಟಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ/ಪಟ್ಟಣ ಪಂಚಾಯತ್/ಪುರಸಭೆಯ ಕಾರ್ಯಾಲಯಗಳಲ್ಲಿ ಪ್ರಕಟಿಸುವುದು ಹಾಗೂ ಆಶಾ ಆರಂಭಿಕ ತರಬೇತಿಗೆ ನಿಯೋಜನೆ ಮಾಡುವುದು.

9) ಆಶಾ ಕಾರ್ಯಕರ್ತೆಯರು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ನೇಮಕಾತಿ ಆದೇಶವನ್ನು ನೀಡಬಾರದು.

10) ಆಶಾ ಆರಂಭಿಕ ತರಬೇತಿಯು ಮುಗಿದ ನಂತರ ಆಶಾ ಕಾರ್ಯಕರ್ತೆಯರ ಚಟುವಟಿಕೆಗಳಿಗೆ ನಿಯೋಜನೆ ಮಾಡುವುದು.



Scanned with OKEN Scanner

೩.೩. ನಗರ ಪ್ರದೇಶ :

1) ಆಶಾ ಕಾರ್ಯಕರ್ತೆಯ ಹುದ್ದೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಮಹಿಳಾ ಆರೋಗ್ಯ ಸಮಿತಿಯು ಸಿದ್ಧಪಡಿಸಿ ಅಭ್ಯರ್ಥಿಯ ಪೂರ್ವಾಹತೆಯ ಪರಿಶೀಲನೆಗೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಿಗೆ ಸಲ್ಲಿಸಬೇಕು.

2) ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿ ತಾಳೆಪಟ್ಟಿಯನ್ವಯ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಮುಂದೆ ಪ್ರಸ್ತಾಪಿಸಿ ಅನುಮೋದನೆ ಪಡೆದು ನಗರ ಸಭೆ/ನಗರ ಪಾಲಿಕೆಗೆ ಸಲ್ಲಿಸುವುದು. ತಾಳೆಪಟ್ಟಿಯ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

3) ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ ನಗರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ನಗರಸಭೆ/ನಗರಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿಗೆ ಸಲ್ಲಿಸುವುದು. ಸಂಕ್ಷೇಪಿಕರಣವನ್ನು ಅಂಕಗಳನ್ನು ನೀಡುವ ಮೂಲಕ ಮಾಡುವುದು. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

4) ನಗರ ಸಭೆಯ ಸಾಮಾನ್ಯ ಸ್ಥಾಯಿ/ನಗರಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿಯು ಸಾಮಾನ್ಯ/ವಿಶೇಷ/ತುರ್ತುಸಭೆಯ ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಅಭ್ಯರ್ಥಿಯ ಹೆಸರನ್ನು ಆಯ್ಕೆ ಮಾಡುವುದು.

5) ಆಯ್ಕೆಯಾದ ಅಭ್ಯರ್ಥಿಯ ವಿವರಗಳನ್ನು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ ನಗರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸಲ್ಲಿಸುವುದು, ಬೆಂಗಳೂರು ನಗರದಲ್ಲಿ ವಲಯ ಆರೋಗ್ಯಾಧಿಕಾರಿಗಳಿಗೆ ಸಲ್ಲಿಸಬೇಕು.

6) ತಾಲ್ಲೂಕು ಆರೋಗ್ಯಾಧಿಕಾರಿಗಳು/ವಲಯ ಆರೋಗ್ಯಾಧಿಕಾರಿಗಳು ಆಯ್ಕೆ ಪ್ರಕ್ರಿಯೆಯನ್ನು ಪರಿಶೀಲಿಸಿ ನಿಯಾಮಾನುಸಾರ ಪಾಲನೆಯಾಗದಿದ್ದಲ್ಲಿ ಮರುಪರಿಶೀಲನೆಗೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳಿಗೆ ಹಿಂತಿರುಗಿಸುವುದು.

7) ನಿಯಾಮವಳಿಗಳ ಪ್ರಕಾರ ಆಯ್ಕೆಯಾದ ವಿವರಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳು/ವಲಯ ಆರೋಗ್ಯಾಧಿಕಾರಿಗಳು ಕ್ರೋಡಿಕರಿಸಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು/ ನಗರ ಯೋಜನಾ ನಿರ್ವಹಣಾ ಅಧಿಕಾರಿಗಳು (ಎನ್.ಯು.ಹೆಚ್.ಎಂ) ಇವರಿಗೆ ಸಲ್ಲಿಸುವುದು.

8) ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು/ ನಗರ ಯೋಜನಾ ನಿರ್ವಹಣಾ ಅಧಿಕಾರಿಗಳು (ಎನ್.ಯು.ಹೆಚ್.ಎಂ) ವಿವರಗಳನ್ನು ಪರಿಶೀಲಿಸಿ ಅಂತಿಮವಾಗಿ ಜಿಲ್ಲಾ ಆರೋಗ್ಯ



Scanned with OKEN Scanner

ಸೊಸೈಟಿ/ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಮತ್ತು ಕುಟುಂಬ ಕಲ್ಯಾಣ ಸೊಸೈಟಿ/ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಸೊಸೈಟಿಯ ಅನುಮೋದನೆ ಪಡೆಯುವುದು.

ಸೊಸೈಟಿಯ ಅನುಮೋದನೆ ಪಡೆಯುವುದು. ಸೊಸೈಟಿ/ನಗರ ಆರೋಗ್ಯ ಮತ್ತು

9) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ/ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಅನುಮೋದನೆಯ ನಂತರ ಆಯ್ಕೆಯಾದ ಪಟ್ಟಿಯನ್ನು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ವಾರ್ಡ್ ಕಾರ್ಯಾಲಯಗಳಲ್ಲಿ ಪ್ರಕಟಿಸುವುದು ಹಾಗೂ ಆಶಾ ಆರಂಭಿಕ ತರಬೇತಿಗೆ ನಿಯೋಜನೆ ಮಾಡುವುದು.

10) ಆಶಾ ಕಾರ್ಯಕರ್ತೆಯರು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ನೇಮಕಾತಿ ಆದೇಶವನ್ನು ನೀಡಬಾರದು.

3.4 ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಮೇಲ್ಮನವಿ ಪ್ರಾಧಿಕಾರಗಳು: ಅಂತಿಮ ಆಯ್ಕೆ ಪ್ರಕ್ರಿಯೆಯು ಮುಗಿದ ನಂತರ ಆಯ್ಕೆ ಪಟ್ಟಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ/ಗ್ರಾಮ ಪಂಚಾಯತ್/ಪಟ್ಟಣ ಪಂಚಾಯತ್/ಪುರಸಭೆ/ನಗರ ಸಭೆ ಹಾಗೂ ನಗರ ಪಾಲಿಕೆ ವಾರ್ಡ್ ಕಾರ್ಯಾಲಯದಲ್ಲಿ ಪ್ರಕಟಿಸುವುದು. ಈ ಪಟ್ಟಿಯ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಅಧ್ಯಕ್ಷರಾದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಬೆಂಗಳೂರು ನಗರದಲ್ಲಿ ಬೃಹತ್ ಬೆಂಗಳೂರು ನಗರ ಪಾಲಿಕೆಯ ವಿಶೇಷ ಆಯುಕ್ತರು (ಆರೋಗ್ಯ ಮತ್ತು ಮಾಹಿತಿ ತಂತ್ರಜ್ಞಾನ), ಇವರಿಗೆ 7 ದಿನಗಳ ಒಳಗೆ ಮನವಿ ಸಲ್ಲಿಸಿ ಬಗೆಹರಿಸಿಕೊಳ್ಳುವುದು.

4. ಆಶಾ ಕಾರ್ಯಕರ್ತೆಯ ಅನರ್ಹಗೊಳಿಸುವ ಪ್ರಕ್ರಿಯೆ:

1. ಆಶಾ ಕಾರ್ಯಕರ್ತೆಯರ ಮೇಲೆ ದೂರು ದಾಖಲಾದಲ್ಲಿ ದೂರಿನ ಬಗ್ಗೆ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಿಂದ ಪ್ರಾಥಮಿಕ ತನಿಖೆ ನಡೆಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಮರು ತನಿಖೆ ನಡೆಸಿ ದೂರುದಾರರು ಮತ್ತು ಆಶಾ ಕಾರ್ಯಕರ್ತೆಯಿಂದ ಸಮಜಾಯಿಸಿ ಪಡೆದು ಸಂಬಂಧಪಟ್ಟ ಗ್ರಾಮ ಪಂಚಾಯತ್/ಪಟ್ಟಣ ಪಂಚಾಯತ್/ಪುರಸಭೆ/ನಗರಸಭೆ/ನಗರಪಾಲಿಕೆಗೆ ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುವುದು.ಗ್ರಾಮಪಂಚಾಯತ್/ಪಟ್ಟಣಪಂಚಾಯತ್/ಪುರಸಭೆ/ನಗರಸಭೆ/ನಗರಪಾಲಿಕೆ ಗಳ ಆಡಳಿತ ವರ್ಗವು ಸದರಿ ಆಶಾ ಕಾರ್ಯಕರ್ತೆಯರನ್ನು ಕರ್ತವ್ಯದಿಂದ ಅನರ್ಹತೆಗೊಳಿಸುವುದು. ಅನರ್ಹಗೊಳಿಸಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಸೂಕ್ತವಾದ ಪ್ರಚಾರ ನೀಡುವುದು.

5. ಆಶಾ ಕಾರ್ಯಕರ್ತೆಯನ್ನು ಅನರ್ಹಗೊಳಿಸುವ ಸಂಧರ್ಭಗಳು:

1. ಆಶಾ ಕಾರ್ಯಕರ್ತೆಯು ಸ್ವಯಂ ಪ್ರೇರಿತವಾಗಿ ಕರ್ತವ್ಯವನ್ನು ತ್ಯಜಿಸಲು ಲಿಖಿತ ರೂಪದಲ್ಲಿ ಹೇಳಿಕೆಯನ್ನು ನೀಡುವುದು.
2. ನಿರಂತರವಾಗಿ ಮೂರು ತಿಂಗಳು ಆಶಾ ಕಾರ್ಯಕರ್ತೆಯು ನಿರ್ಧಾರಿತ ಗುರಿಗಳು ಮತ್ತು ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸದಿರುವುದು ಮತ್ತು ತೃಪ್ತಿಕರವಾಗದಿರುವುದು.



Scanned with OKEN Scanner

3. ಆಶಾ ಕಾರ್ಯಕರ್ತೆಯರು ತನ್ನ ಕಾರ್ಯಕ್ಷೇತ್ರದಲ್ಲಿ ನಿರಂತರವಾಗಿ ಮೂರು ತಿಂಗಳು ವಾಸವಿಲ್ಲದಿರುವುದು.
4. ಆಶಾ ಕಾರ್ಯಕರ್ತೆಯು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಪೂರ್ವಾನುಮತಿಯಿಲ್ಲದೆ ನಿರಂತರವಾಗಿ ಮೂರು ತಿಂಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಗೈರುಹಾಜರಾಗುವುದು.
5. ಆಶಾ ಕಾರ್ಯಕರ್ತೆಯು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ತಿಂಗಳು ಕಾಲ ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ಆಹಾರ ದಿನಾಚರಣೆಯನ್ನು ಸಂಘಟನೆ ಮಾಡದಿರುವುದು.
6. ಭಾರತೀಯ ದಂಡ ಸಂಹಿತೆ/ ಅಪರಾಧ ದಂಡ ಸಂಹಿತೆಯ ಪ್ರಕಾರ ಪ್ರಕರಣಗಳು ದಾಖಲಾಗಿ ಪ್ರಥಮ ವರ್ತಮಾನ ವರದಿಯು ಸಲ್ಲಿಕೆಯಾದ ಸಂಧರ್ಭಗಳು.
7. ಬಾಲ್ಯ ವಿವಾಹ, ಕೌಟುಂಬಿಕ ದೌರ್ಜನ್ಯ, ಹೆಣ್ಣು ಭ್ರೂಣ ಹತ್ಯೆ ಹಾಗೂ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳಿಗೆ ಉತ್ತೇಜನ.
8. ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವುದು ಮತ್ತು ಭ್ರಷ್ಟಾಚಾರಕ್ಕೆ ಪ್ರೇರಣೆ ನೀಡಿದ ಘಟನೆಗಳು ದೃಡಪಟ್ಟ ಸಂಧರ್ಭಗಳು.
9. ಉನ್ನತ ಅಧಿಕಾರಿಗಳು ಆರೋಗ್ಯ ವರ್ಧಕ ಚಟುವಟಿಕೆಗಳಿಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಲು ನಿರಾಕರಿಸಿದ ಸಂಧರ್ಭಗಳು.
10. ಕರ್ನಾಟಕ ರಾಜ್ಯ ಘನ ಉಚ್ಚನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಯ ಅಂತಿಮ ತೀರ್ಪಿನ ಷರತ್ತಿಗೆ ಒಳಪಟ್ಟಂತೆ ಶಾಸನಬದ್ಧ ಸಂಸ್ಥೆಗಳಲ್ಲಿ ಚುನಾಯಿತ ಸದಸ್ಯರಾಗಿ ಆಯ್ಕೆಯಾಗಿ ಎರಡು ಹುದ್ದೆಗಳನ್ನು ನಿರ್ವಹಿಸುವ ಸಂದರ್ಭಗಳು. (ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಯಾವುದೇ ರೀತಿಯ ಸಹಕಾರ ಸಂಘಗಳು)
11. ಇತರೆ ಸಾಂಧರ್ಭಿಕ ಘಟನೆಗಳು.

ಅನರ್ಹತೆಯ ನಂತರ ಆಶಾ ಕಾರ್ಯಕರ್ತೆಗೆ ಇಲಾಖೆಯ ವತಿಯಿಂದ ನೀಡಲಾದ ಪರಿಕರ ಮತ್ತು ಸಾಮಗ್ರಿಗಳನ್ನು (ಸಿಯುಜಿ ಸಿಮ್, ಹೆಚ್.ಬಿ.ಎನ್.ಸಿ ಕಿಟ್) ಹಿಂಪಡೆಯುವುದು.

ಈ ಮಾರ್ಗಸೂಚಿಗಳು ಹೊಸ ಆಶಾ ಕಾರ್ಯಕರ್ತೆಯರ ಆಯ್ಕೆಗೆ ಅನ್ವಯವಾಗಲಿದ್ದು, ಈ ಮಾರ್ಗಸೂಚಿಗಳಂತೆ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡುವುದು. ಮಾರ್ಗಸೂಚಿಗಳು ಉಲ್ಲಂಘನೆಯಾದಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು/ವಲಯ ಆರೋಗ್ಯಾಧಿಕಾರಿಗಳು ನೇರ ಹೊಣೆಗಾರರು. ಅರೆ ನಗರ ಪ್ರದೇಶಗಳಲ್ಲಿ ಖಾಲಿಯಾಗುವ ಆಶಾ ಕಾರ್ಯಕರ್ತೆಯರ ಹುದ್ದೆಗಳಿಗೆ ಹೊಸ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲು ಅಗತ್ಯ ಪ್ರಮಾಣದ ಜನಸಂಖ್ಯೆಯಿಲ್ಲದಿದ್ದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಜನಸಂಖ್ಯೆಯನ್ನು ಹಂಚಿಕೆ ಮಾಡುವುದು. ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಈ ಮೂಲಕ ಸೂಚಿಸಲಾಗಿದೆ.

ಈ ಮಾರ್ಗಸೂಚಿಗಳನ್ನು ಭಾರತ ಸರ್ಕಾರದ ಸಮುದಾಯ ಪ್ರಕ್ರಿಯೆ ಮಾರ್ಗಸೂಚಿಗಳು 2014ರನ್ವಯ ರೂಪಿಸಲಾಗಿದೆ. ಈ ಆಯ್ಕೆ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಮತ್ತು



Scanned with OKEN Scanner

ಯಾವುದೇ ರೀತಿಯ ಕಾನೂನು ವಿವಾದಕ್ಕೆ ಅವಕಾಶಕೊಡದಂತೆ ಎಚ್ಚರಿಕೆವಹಿಸಿ ಆಯ್ಕೆ ಪ್ರಕ್ರಿಯೆಯನ್ನು ನಿರ್ವಹಿಸುವುದು.

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಪ್ರತಿ : ಮಾಹಿತಿಗಾಗಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
3. ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.
5. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
7. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
8. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ
9. ಅಪರ ನಿರ್ದೇಶಕರು, ಉತ್ತರ ಕರ್ನಾಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಜಯಪುರ
10. ವಿಭಾಗೀಯ ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ, ಬಿ.ಬಿ.ಎಂ.ಪಿ.

ಪ್ರತಿ : ಮುಂದಿನ ಕ್ರಮಕ್ಕಾಗಿ.

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
3. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು.
4. ನಗರ ಯೋಜನಾ ನಿರ್ವಹಣಾ ಅಧಿಕಾರಿಗಳು, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
5. ಕಚೇರಿ ಪ್ರತಿ



Scanned with OKEN Scanner

ಆಶಾ ಕಾರ್ಯಕರ್ತೆಗೆ ಆಯ್ಕೆಯಾಗಲು ಸಲ್ಲಿಸಬೇಕಾದ ವಿವರಗಳು:

ಎ. ಪ್ರಾದೇಶಿಕ ವಿವರಗಳು.

ಜಿಲ್ಲೆ: ತಾಲ್ಲೂಕು:

ನಗರ/ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರದ ಹೆಸರು:

ಆರೋಗ್ಯ ಉಪ ಕೇಂದ್ರದ ಹೆಸರು:

ಗ್ರಾಮ ಪಂಚಾಯತ್ ಹೆಸರು:

ಗ್ರಾಮದ ಹೆಸರು ಮತ್ತು ಎಲ್.ಜಿ.ಡಿ ಕೋಡ್:

ವಾರ್ಡ್ ಸಂಖ್ಯೆ ಮತ್ತು ನಗರ ಸ್ಥಳೀಯ ಸಂಸ್ಥೆಯ ಎಲ್.ಜಿ.ಡಿ ಕೋಡ್:

ಬಿ. ವೈಯುಕ್ತಿಕ ವಿವರಗಳು.

1. ಅಭ್ಯರ್ಥಿಯ ಹೆಸರು :
2. ಅಭ್ಯರ್ಥಿಯ ಪತಿಯ ಹೆಸರು:
3. ಅಭ್ಯರ್ಥಿಯ ತಾಯಿಯ ಹೆಸರು:
4. ಅಭ್ಯರ್ಥಿಯ ತಂದೆಯ ಹೆಸರು:
5. ಅಭ್ಯರ್ಥಿಯ ವಿಳಾಸ:-------------------
   -------------------
6. ಜನ್ಮ ದಿನಾಂಕ: ____________ (ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಜನನ ಪ್ರಮಾಣ ಪತ್ರದ ಅನುಸಾರ)
7. ರಾಷ್ಟ್ರೀಯತೆ:
8. ಆರ್ಥಿಕ ಸ್ಥಿತಿ: ಬಿಪಿಎಲ್/ಎಪಿಎಲ್.
9. ಸಾಮಾಜಿಕ ಸ್ಥಿತಿ: ಎಸ್‌ಸಿ/ಎಸ್‌ಟಿ/ಒಬಿಸಿ/ಸಾಮಾನ್ಯ/ಇಡಬ್ಲೂಎಸ್. (ಸಕ್ಷಮ ಪ್ರಾಧಿಕಾರಿಗಳ ಪ್ರಮಾಣ ಪತ್ರವನ್ನು ಸಲ್ಲಿಸಬೇಕು)
10. ವೈವಾಹಿಕ ಸ್ಥಿತಿ: ವಿವಾಹಿತೆ/ವಿಧವೆ/ವಿಚ್ಚೇದಿತೆ/ಪರಿತ್ಯಕ್ತ (ವಿಧವೆ/ವಿಚ್ಚೇದಿತೆ/ಪರಿತ್ಯಕ್ತ ಮಹಿಳೆಯರು ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಸೂಕ್ತ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.



Scanned with OKEN Scanner

11. ಆಧಾರ್ ಸಂಖ್ಯೆ :
12. ಸಂತಾನ ನಿರೋಧ ಚಿಕಿತ್ಸೆಯ ದಿನಾಂಕ ಮತ್ತು ದೃಡೀಕರಣ ಪತ್ರದ ಸಂಖ್ಯೆ:
(ಸಂತಾನ ನಿರೋಧ ದೃಡೀಕರಣ ಪತ್ರವನ್ನು ಸಲ್ಲಿಸಬೇಕು)

## ಸಿ-ಶೈಕ್ಷಣಿಕ ವಿವರಗಳು.

| ಕ್ರ.ಸಂ | ವಿದ್ಯಾರ್ಹತೆ | ತೇರ್ಗಡೆಯಾದ ವರ್ಷ | ಪರೀಕ್ಷಾ ಮಂಡಳಿ/ವಿಶ್ವ ವಿದ್ಯಾನಿಲಯದ ಹೆಸರು | ಷರಾ |
|---|---|---|---|---|
| | | | | |
| | | | | |
| | | | | |
| | | | | |
| | | | | |

## ಅಭ್ಯರ್ಥಿಯ ಘೋಷಣಾ ಪತ್ರ

ಶ್ರೀಮತಿ/ಕು||_________ಆದ ನಾನು _____________ಗ್ರಾಮ/ಪ್ರದೇಶದ ನಿವಾಸಿಯಾಗಿದ್ದು, ಆಶಾ ಕಾರ್ಯಕರ್ತೆಯ ಹುದ್ದೆಗೆ ಆಯ್ಕೆಯಾಗಲು ನೀಡಿರುವ ಮಾಹಿತಿಗಳು/ವಿವರಗಳು/ಪ್ರಮಾಣಪತ್ರಗಳು ನಾನು ತಿಳಿದಿರುವ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಡಿಕರಿಸುತ್ತೇನೆ ಹಾಗೂ ಘೋಷಿಸುತ್ತೇನೆ. ಅಸತ್ಯವೆಂದು ದೃಡಪಟ್ಟಲ್ಲಿ ಶಾಸನಾತ್ಮಕ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ



Scanned with OKEN Scanner

ಅನುಬಂಧ-1

## ಸಂಕ್ಷೇಪಿಕರಣ ನಮೂನೆ (ಗ್ರಾಮೀಣ ಪ್ರದೇಶ/ಅರೆ ನಗರ ಪ್ರದೇಶ)

ಅಭ್ಯರ್ಥಿಯ ಹೆಸರು:

| ಕ್ರ.ಸಂ | ಮಾನದಂಡ | ವಿವರಣೆ | ಮಾನದಂಡಕ್ಕೆ ಪ್ರಸ್ತಾಪಿತ ಅಂಕಗಳು | ಪೂರ್ಣಾಂಕಗಳು | ಅಭ್ಯರ್ಥಿಯು ಪಡೆದ ಅಂಕಗಳು |
|---|---|---|---|---|---|
| 1 | ಶೈಕ್ಷಣಿಕ ವಿದ್ಯಾರ್ಹತೆ | ಸ್ನಾತಕ ಪದವಿ/ಸಮಾನಾಂತರ ಮತ್ತು ಸ್ನಾತಕ ಪದವಿಗಿಂತ ಹೆಚ್ಚು | 3 | 3 | |
| | | ದ್ವಿತಿಯ ಪಿ.ಯು.ಸಿ/ಸಮಾನಾಂತರ ವಿದ್ಯಾರ್ಹತೆ | 2 | | |
| | | ಎಸ್.ಎಸ್.ಎಲ್.ಸಿ | 1 | | |
| 2 | ತಾಂತ್ರಿಕ ಶೈಕ್ಷಣಿಕ ವಿದ್ಯಾರ್ಹತೆ | ಅರೆ ವೈದ್ಯಕೀಯ ಕೋರ್ಸ್‌ಗಳು | 1 | 1 | |
| 3 | ತಾಂತ್ರಿಕ ಶೈಕ್ಷಣಿಕ ವಿದ್ಯಾರ್ಹತೆ | ಕಂಪ್ಯೂಟರ್ ಸಾಕ್ಷರತೆ | 1 | 1 | |
| 4 | ವೈವಾಹಿಕ ಸ್ಥಿತಿ | ವಿಧವೆ/ವಿಚ್ಛೇದಿತಾ/ಪರಿತ್ಯಕ್ತ | 1 | 1 | |
| 5 | ನಿವಾಸಿ ಸ್ಥಿತಿ | ಸ್ಥಳೀಯ ಪ್ರದೇಶದಲ್ಲಿ ಏಳು ವರ್ಷಗಳಗಿಂತ ಹೆಚ್ಚು ಕಾಲ ಖಾಯಂ ವಾಸ | 3 | 3 | |
| | | ಸ್ಥಳೀಯ ಪ್ರದೇಶದಲ್ಲಿ 5-7 ವರ್ಷಗಳ ಕಾಲ ಖಾಯಂ ವಾಸ | 2 | | |
| | | ಸ್ಥಳೀಯ ಪ್ರದೇಶದಲ್ಲಿ 3-5 ವರ್ಷಗಳ ಕಾಲ ಖಾಯಂ ವಾಸ | 1 | | |
| 6 | ಅಭಿವೃದ್ಧಿ ಕ್ಷೇತ್ರದ ಪೂರ್ವಾನುಭವ | ಆರೋಗ್ಯ ಸಂಬಂಧಿ ವಲಯಗಳ ವಿವಿಧ ಯೋಜನೆಗಳಲ್ಲಿ ನಿರ್ವಹಿಸಿದ ಪೂರ್ವಾನುಭವ (ಲಿಂಕ್ ವರ್ಕರ್,ಸಾಕ್ಷರತಾ ಪ್ರೇರಕರು/ಗ್ರಂಥಪಾಲಕರು/ಇತರೆ) | 1 | 1 | |
| | | | ಒಟ್ಟು | 10 | |

ವಿ.ಸೂ: ಸಮಾನ ಅಂಕಗಳು ಬಂದ ಸಂಧರ್ಭದಲ್ಲಿ ವಯಸ್ಸಿನಲ್ಲಿ ಹಿರಿಯರನ್ನು ಪರಿಗಣಿಸುವುದು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಸಹಿ



Scanned with OKEN Scanner

ಅನುಬಂಧ-2

ಸಂಕ್ಷೇಪಿಕರಣ ನಮೂನೆ (ನಗರ ಪ್ರದೇಶಗಳು)

ಅಭ್ಯರ್ಥಿಯ ಹೆಸರು:

| ಕ್ರ.ಸಂ | ಮಾನದಂಡ | ವಿವರಣೆ | ಮಾನದಂಡಕ್ಕೆ ಪ್ರಸ್ತಾಪಿತ ಅಂಕಗಳು | ಪೂರ್ಣಾಂಕಗಳು | ಅಭ್ಯರ್ಥಿಯು ಪಡೆದ ಅಂಕಗಳು |
|---|---|---|---|---|---|
| 1 | ಶೈಕ್ಷಣಿಕ ವಿದ್ಯಾರ್ಹತೆ | ಸ್ನಾತಕ ಪದವಿ/ಸಮಾನಾಂತರ ಮತ್ತು ಸ್ನಾತಕ ಪದವಿಗಿಂತ ಹೆಚ್ಚು | 3 | 3 | |
| | | ದ್ವಿತಿಯ ಪಿ.ಯು.ಸಿ/ಸಮಾನಾಂತರ ವಿದ್ಯಾರ್ಹತೆ | 2 | | |
| | | ಎಸ್.ಎಸ್.ಎಲ್.ಸಿ | 1 | | |
| 2 | ತಾಂತ್ರಿಕ ಶೈಕ್ಷಣಿಕ ವಿದ್ಯಾರ್ಹತೆ | ಅರೆ ವೈದ್ಯಕೀಯ ಕೋರ್ಸ್‌ಗಳು | 1 | 1 | |
| 3 | ತಾಂತ್ರಿಕ ಶೈಕ್ಷಣಿಕ ವಿದ್ಯಾರ್ಹತೆ | ಕಂಪ್ಯೂಟರ್ ಸಾಕ್ಷರತೆ | 1 | 1 | |
| 4 | ವೈವಾಹಿಕ ಸ್ಥಿತಿ | ವಿಧವೆ/ವಿಚ್ಛೇದಿತಾ/ಪರಿತ್ಯಕ್ತ | 1 | 1 | |
| 5 | ನಿವಾಸಿ ಸ್ಥಿತಿ | ಸ್ಥಳೀಯ ಪ್ರದೇಶದಲ್ಲಿ ಏಳು ವರ್ಷಗಳಗಿಂತ ಹೆಚ್ಚು ಕಾಲ ಖಾಯಂ ವಾಸ | 3 | 3 | |
| | | ಸ್ಥಳೀಯ ಪ್ರದೇಶದಲ್ಲಿ 5-7 ವರ್ಷಗಳ ಕಾಲ ಖಾಯಂ ವಾಸ | 2 | | |
| | | ಸ್ಥಳೀಯ ಪ್ರದೇಶದಲ್ಲಿ 3-5 ವರ್ಷಗಳ ಕಾಲ ಖಾಯಂ ವಾಸ | 1 | | |
| 6 | ಅಭಿವೃದ್ಧಿ ಕ್ಷೇತ್ರದ ಪೂರ್ವಾನುಭವ | ಆರೋಗ್ಯ ಸಂಬಂಧಿ ವಲಯಗಳ ವಿವಿಧ ಯೋಜನೆಗಳಲ್ಲಿ ನಿರ್ವಹಿಸಿದ ಪೂರ್ವಾನುಭವ (ಅಂಕ್ ವರ್ಕರ್,ಸಾಕ್ಷರತಾ ಪ್ರೇರಕರು/ಗ್ರಂಥಪಾಲಕರು/ಇತರೆ) | 1 | 1 | |
| | | | ಒಟ್ಟು | 10 | |

ವಿ.ಸೂ: ಸಮಾನ ಅಂಕಗಳು ಬಂದ ಸಂಧರ್ಭದಲ್ಲಿ ವಯಸ್ಸಿನಲ್ಲಿ ಹಿರಿಯರನ್ನು ಪರಿಗಣಿಸುವುದು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಸಹಿ



Scanned with OKEN Scanner

## ಕ್ರೋಢಿಕೃತ ಸಂಕ್ಷೇಪಿಕರಣ ಪತ್ರ

| ಕ್ರ.ಸಂ | ಅಭ್ಯರ್ಥಿಯ ಹೆಸರು | ಪಡೆದ ಅಂಕಗಳು | ಶ್ರೇಣಿ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |
| 7 | | | |
| 8 | | | |
| 9 | | | |
| 10 | | | |

ಪ್ರಾಥಮಿಕ ಆರೋಗ್ಯ ಕೇಂದ್ರ/ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಸಹಿ

Scanned with OKEN Scanner

ಅನುಬಂಧ - 3

## ಅನುಬಂಧ-3

ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಗೆ ಅನುಸಾರವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರೋತ್ಸಾಹಧನವನ್ನು 40 ಆರೋಗ್ಯ ಸಂಬಂಧಿ ಚಟುವಟಿಕೆಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

### ಎ. ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | ಗ್ರಾಮ ಆರೋಗ್ಯ ಮತ್ತು ಪೌಷ್ಠಿಕ ಆಹಾರ ದಿನಾಚರಣೆಯಲ್ಲಿ ಭಾಗಿಯಾದರೆ | 200 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಹಾಜರಾದರೆ | 150 |
| 3 | ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಪೌಷ್ಠಿಕಾಂಶ ಸಮಿತಿ ಸಭೆಯನ್ನು ನಡೆಸಿದರೆ | 150 |
| 4 | ಗರ್ಭಿಣಿಯರ ಪಟ್ಟಿಯ ನಿರ್ವಹಣೆ | 300 |
| 5 | ಅರ್ಹದಂಪತಿಗಳ ಪಟ್ಟಿಯನ್ನು ತಯಾರಿಸುವುದು | 300 |
| 6 | ಮನೆ ಮನೆ ಸಮೀಕ್ಷೆ | 300 |
| 7 | ಗ್ರಾಮ ಆರೋಗ್ಯ ಪುಸ್ತಕದ ನಿರ್ವಹಣೆಗೆ | 300 |
| 8 | ಚುಚ್ಚುಮದ್ದು ಸೇವೆಗಳಿಗೆ ಅರ್ಹ ಮಕ್ಕಳ ಪಟ್ಟಿಯನ್ನು ತಯಾರಿಸಿದರೆ | 300 |

### ಬಿ. ಕಾರ್ಯನಿರ್ವಹಣಾ ಪ್ರೋತ್ಸಾಹಧನಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1. | ಗರ್ಭಿಣಿ ಆರೈಕೆಗೆ | 300/200 |
| 2. | ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಿ ಗರ್ಭಿಣಿಯನ್ನು ಆರೋಗ್ಯ ಸಂಸ್ಥೆಗೆ ಕರೆದೊಯ್ಯದರೆ | 300/200 |
| 3. | ತಾಯಿ ಮರಣದ ವರದಿ | 200 |
| 4. | ಗೃಹಆಧಾರಿತ ನವಜಾತ ಶಿಶು ಆರೈಕೆ | 250 |
| 5. | ಕಡಿಮೆ ಹುಟ್ಟು ತೂಕದ ಮಕ್ಕಳ ಅನುಸರಣೆ | 50 |
| 6. | ಎಸ್.ಎನ್.ಸಿ.ಯುವಿನಿಂದ ಬಿಡುಗಡೆಯಾದ ಮಕ್ಕಳ ಅನುಸರಣೆ | 50 |
| 7. | ಮಾ ಕಾರ್ಯಕ್ರಮದಡಿ ಬೆಂಬಲ ಗುಂಪುಗಳ ಸಭೆಯನ್ನು ನಡೆಸಲು | 100 |
| 8. | ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸುವುದು ಮತ್ತು ಆರೋಗ್ಯ ಸಂಸ್ಥೆಗಳಿಗೆ ಶಿಫಾರಸು ಮಾಡುವುದು. | 150 |
| 9. | ಚುಚ್ಚುಮದ್ದು ಸೇವೆಗಳಿಗೆ ಫಲಾನುಭವಿಗಳನ್ನು ಸಂಘಟಿಸುವುದು. | 150 |

Scanned with OKEN Scanner

| | | |
|---|---|---|
| 10. | ಮೊದಲ ವರ್ಷದ ಚುಚ್ಚುಮದ್ದು ಸೇವೆಗಳಿಗೆ | 100 |
| 11. | ಎರಡನೇ ವರ್ಷದ ಚುಚ್ಚುಮದ್ದು ಸೇವೆಗಳು | 75 |
| 12. | 5-6 ವರ್ಷದ ಮಕ್ಕಳಿಗೆ ಡಿ.ಪಿ.ಟಿ ಬೂಸ್ಟರ್ ಲಸಿಕೆಯನ್ನು ಕೊಡಿಸಿದರೆ | 50 |
| 13. | ಪಿ.ಪಿ.ಐ.ಯು.ಸಿ.ಡಿ ಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಿದರೆ | 150 |
| 14. | ಪುರುಷರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 200 |
| 15. | ಸ್ತ್ರೀಯರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 150 |
| 16. | ಅನಪೇಕ್ಷಿತ ಗರ್ಭಧಾರಣೆಗಳಿಗೆ ವೈದ್ಯಕೀಯ ಗರ್ಭಪಾತಕ್ಕೆ ಉತ್ತೇಜಿಸಿದರೆ | 100 |
| 17. | ಎರಡು ಜನನದ ನಡುವೆ ಅಂತರವನ್ನು ಖಾತ್ರಿಪಡಿಸಿದರೆ | 500 |
| 18. | ಪಿ.ಎ.ಐ.ಯು.ಸಿ.ಡಿ ಅಳವಡಿಕೆಗೆ ಪ್ರೋತ್ಸಾಹಿಸುವುದು | 150 |
| 19. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಬಹುವಿಧ ಔಷಧಿ ಕ್ಷಯ ರೋಗ ಚಿಕಿತ್ಸೆ ನೀಡಿದರೆ | 5000 |
| 20 | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೊಸ ಮತ್ತು ಹಿಂದಿನ ಆರೈಕೆ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 21. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೆಚ್-ಮಾನೋಪಲಿ ರೆಜಿಮನ್ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 22 | ಕುಷ್ಠರೋಗಿಗಳಿಗೆ (ಎಂ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 600 |
| 23 | ಕುಷ್ಠರೋಗಿಗಳಿಗೆ (ಪಿ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 400 |
| 24 | ಕುಷ್ಠ ರೋಗಿಗಳನ್ನು ಗುರುತಿಸುವಿಕೆ | 250 |
| 25 | ಮಲೇರಿಯಾ ರೋಗಕ್ಕೆ ಚಿಕಿತ್ಸೆ | 200 |
| 26 | ಸಂಶಯಾಸ್ಪದ ಮಲೇರಿಯಾ ಪ್ರಕರಣಗಳ ಸ್ಲೈಡ್ ತಯಾರಿಸುವುದು | 150 |
| 27 | ಉಪ್ಪಿನ ಪರೀಕ್ಷೆ | 25 |
| 28 | ಹೆಚ್‌ಬಿವೈಸಿ | 250 |
| 29 | ಎನ್‌ಸಿಡಿ ಚಟುವಟಿಕೆಗಳು | 110 |
| 30 | ಅಂತರ ಚುಚ್ಚುಮದ್ದು ಪಡೆಯಲು ಅರ್ಹ ಫಲಾನುಭವಿಗಳನ್ನು ಪ್ರೇರೆಪಿಸಿದರೆ | 100 |
| 31. | ePMSMA ಗೆ ಗಂಡಾಂತರ ಗರ್ಭಿಣಿಯರನ್ನು ಕರೆದೊಯ್ಯುದರೆ (ಗರಿಷ್ಠ 3 ಭೇಟಿಗಳು) | 100 (ಪ್ರತಿ ಭೇಟಿಗೆ) |
| 32 | ಗಂಡಾಂತರ ಬಾಣಂತಿಯರ ಅನುಸರಣ ಮನೆ ಭೇಟಿಗಳಿಗೆ | 250 |

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

Scanned with OKEN Scanner